# ನೀತಿವಂತರಾಗಿ ಸತ್ತವರು ನೇರವಾಗಿ ಪರಲೋಕಕ್ಕೆ ಹೋಗುವರೋ?

ಒಂದು ಮಗುವಿನ ಮುಖದ ಮೇಲೆ ಕಣ್ಣೀರು ಹರಿಯುತ್ತಿರುತ್ತದೆ, "ನನ್ನ ಅಮ್ಮ ಎಲ್ಲಿ?" ಎಂದು ಕೇಳುತ್ತದೆ ಆತನನ್ನು ನಿನ್ನ ಕೈಯಲ್ಲಿ ತೆಗೆದುಕೊಂಡು ಸಣ್ಣ ಧ್ವನಿಯಲ್ಲಿ, "ಅವಳು ಪರಲೋಕದಲ್ಲಿದ್ದಾಳೆ" ಎಂದು ಹೇಳುತ್ತಿ. ಕಂದು ಬಣ್ಣದ ತಲೆಕೂದಲಿನ ವಿಧವೆಯನ್ನು ಇತ್ತೀಚೆಗೆ ಸಂದರ್ಶಿಸುತ್ತೀರಿ, ಆಕೆಯ ಗಂಡನ ಕೊನೆಯ ದಿನಗಳಲ್ಲಿದ್ದ ಭಯಂಕರ ನೋವಿನ ದೈಹಿಕ ಸ್ಥಿತಿಯ ವಿಷಯವಾಗಿ ಚರ್ಚೆ ಮಾಡುತ್ತೀರಿ, ನಂತರ ನಿನ್ನ ಕೈಗಳನ್ನು ಅವರ ತಲೆಯ ಮೇಲಿಟ್ಟು ಮೆಲ್ಲಗೆ ಸವರುತ್ತಾ, "ಈಗ ಆತನು ಚೆನ್ನಾಗಿದ್ದಾನೆ ಆತನು ದೇವರೊಂದಿಗೆ ಇದ್ದಾನೆ" ಎಂದು ಹೇಳುತ್ತಿ. ಇಂತಹ ಮಾತುಗಳು ಸತ್ತವರ ಕುರಿತಾಗಿ ವೇದಶಾಸ್ತ್ರದ ಮಾತುಗಳಾಗಿವೆಯಾ? ಇಲ್ಲಾ, ಅವರು ಕೇವಲ ಈ ಜೀವಿತ ನಮ್ಮದಲ್ಲ ದೇವರು ತಾನೇ ಅದರ ಕುರಿತು ಕಾಳಜಿ ವಹಿಸುತ್ತಾನೆ ಎನ್ನುವ ನಿಮ್ಮ ನಂಬಿಕೆಯನ್ನು ಪ್ರತಿಕ್ರಿಯಿಸುತ್ತಿದ್ದಾರೆ.

ಪೌಲನು ಕೊರಿಂಥದವನಿಗೆ ಬರೆಯುತ್ತಾ, "... ಧೈರ್ಯವುಳ್ಳವರಾಗಿದ್ದು ದೇಹವನ್ನು ಬಿಟ್ಟು ಕರ್ತನ ಬಳಿಯಲ್ಲಿರುವದೇ ಉತ್ತಮವೆಂದು ಎಣಿಸುತ್ತೇನೆ" (2 ಕೊರಿಂಥ 5:8) ಎಂದು ಹೇಳಿದನು. ಫಿಲಿಪ್ಪಿಯರಿಗೆ ಬರೆದ ಪತ್ರಿಕೆಯಲ್ಲಿ, "ಶರೀರದಲ್ಲಿಯೇ ಬದುಕ ಬೇಕಾದಲ್ಲಿ ಕೆಲಸ ಮಾಡಿ ಫಲಹೊಂದಲು ನನಗೆ ಅನುಕೂಲವಾಗುವುದು. ಹೀಗಿರಲಾಗಿ ನಾನು ಯಾವದನ್ನಾರಿಸಿಕೊಳ್ಳಬೇಕೋ ನನಗೆ ತೋರದು. ಈ ಎರಡರ ನಡುವೆ ಸಿಕ್ಕಿಕೊಂಡಿದ್ದೇನೆ; ಇಲ್ಲಿಂದ ಹೋಗಿ ಬಿಟ್ಟು ಕ್ರಿಸ್ತನ ಜೊತೆಯಲ್ಲಿರಬೇಕೆಂಬುದೇ ನನ್ನ ಅಭಿಲಾಷೆ, ಅದು ಉತ್ತಮೋತ್ತಮ" (ಫಿಲಿಪ್ಪಿ 1:22, 23) ಎಂದು ಅಪೊಸ್ತಲನು ಹೇಳಿದನು. ಯೇಸುವಿನ ಮರಣ ಮತ್ತು ಪುನರುತ್ಥಾನದವರೆಗೆ ನೀತಿವಂತರಾಗಿ ಸತ್ತವರು ನೇರವಾಗಿ ಪರಲೋಕಕ್ಕೆ ಹೋಗುವರು ಎಂದು ಈ ಎರಡು ವಾಕ್ಯ ಭಾಗಗಳನ್ನು ಪೌಲನು ಹೇಳುವ ವಿಧವಾಗಿದೆ ಎಂದು ನಾವು ತೆಗೆದುಕೊಳ್ಳಬೇಕೋ. ಹಾಗಿದ್ದರೂ ಸಹ, ಅವುಗಳನ್ನು ಹೊಂದಿಕೊಳ್ಳುವ ಭಾಷೆಯಂತೆ[1] ನಾವು ನೋಡಬೇಕು - ಇಂದೂ ಕೂಡ ಅದೇ ರೀತಿಯ ಭಾಷೆ ನಾವು ಉಪಯೋಗಿಸುತ್ತಿದ್ದೇವೆ.

ಇತ್ತೀಚೆಗೆ, ಬೋಧಕರು ಮತ್ತು ಸುವಾರ್ತಿಕರು ಈ ಎರಡು ಭಾಗಗಳ ಉದ್ದೇಶಗಳು ಸತ್ತವರ ಸ್ಥಿತಿಯ ಕುರಿತು ಹೊಸ ಸಿದ್ಧಾಂತವನ್ನು ಪರಿಚಯಿಸುತ್ತದೆಂದು ನಂಬುವರನ್ನು ಕಂಡುಕೊಂಡಿದ್ದೇನೆ. ಅವರ ಸ್ಥಿತಿಗೆ ಸಂಬಂಧಪಟ್ಟ ಜ್ಞಾನವು ನನಗೆ ಮಿತಿಯುಳ್ಳದ್ದಾಗಿದೆಂದು ಒಪ್ಪಿಕೊಳ್ಳುತ್ತೇನೆ. ಈ ಅಂಶದ ಹಲವು ನಿರ್ಧಾರಕವಾಗಿರುವ ವಿಷಯಗಳನ್ನು ನಾನು ಚರ್ಚಿಸಿಲ್ಲದಿದ್ದರೆ ನಾನು ಉದ್ದೇಶಪೂರ್ವಕವಾಗಿ ಮಾಡಲಿಲ್ಲವೆಂದು ಆಶ್ವಾಸನೆ ನೀಡುತ್ತೇನೆ.

ನನಗೆ ದೊರಕಿರುವ ಮಾಹಿತಿಗಳಲ್ಲಿ, ಈ ಅಂಶಕ್ಕೆ ಸಂಬಂಧವಿಲ್ಲದ ಅನೇಕ ವಾಕ್ಯ ಭಾಗಗಳನ್ನು ಚರ್ಚಿಸಲು ಪರಿಚಯಿಸಿದ್ದಾರೆ ಎಂಬುದನ್ನು ನಾನು ನೋಡಿದ್ದೇನೆ. ಇಲ್ಲಿ ಕೆಲವು ಮಾದರಿಗಳಿವೆ.

- *ಇಬ್ರಿಯರಿಗೆ 2:14.* ಯೇಸು ಮರಣ ಹೊಂದುವದಕ್ಕಿಂತ ಮೊದಲು ಸೈತಾನನಿಗೆ ಅಗೋಚರವಾದ ಲೋಕದ ಮೇಲೆ ಬಲಹೊಂದಿದ್ದಾನೆಂದು ಹೇಳಲಾಗಿದೆ. ಸೈತಾನನು "ಮರಣದ ಬಲ ಹೊಂದಿದ್ದಾನೆ" ಎಂದು ಹೇಳಿದ ಇಬ್ರಿಯ 2:14ನ್ನು ಆಧಾರ ವಾಕ್ಯವಾಗಿದೆ. ಹಾಗಿದ್ದರೂ, ಅಗೋಚರ ಲೋಕದ ಮೇಲೆ ಬಲ ಹೊಂದಿದ್ದಾನೆ ಎಂದು ವಚನ ಹೇಳುವುದಿಲ್ಲ.

ಆದರೆ ಸೈತಾನನು ಜನರನ್ನು ಕೊಲ್ಲುವ (ಕೆಲವು ಮಾನವರ ಮುಖಾಂತರ) ಬಲ ಹೊಂದಿದ್ದಾನೆ (ಹೊಂದಿರುವನು). ದೇಹವನ್ನು ಕೊಲ್ಲುವ ಇವನಿಗೆ (ಸೈತಾನನಿಗೆ) ಅಗೋಚರವಾಗಿರುವ ಆತ್ಮನ ಮೇಲೆ ಯಾವುದೇ ಅಧಿಕಾರವಿರುವುದಿಲ್ಲ.

- *ಮತ್ತಾಯ 12:24-29.* ಯೇಸು ದೆವ್ವಗಳನ್ನು ಬಿಡಿಸಿದಾಗ ಜನರು ಆತನು ಬೆಲ್ಜಬೂಲನನ ಸಹಾಯದಿಂದ ಬಿಡಿಸುತ್ತಾನೆಂದು ಆರೋಪಿಸಿದಕ್ಕೆ ಯೇಸು ಈ ರೀತಿಯಲ್ಲಿ ಪ್ರತಿಕ್ರಿಯಿಸಿ, ಕರ್ತನು ಹೀಗೆ ಹೇಳಿದನು, "... ಇದಲ್ಲದೆ ಒಬ್ಬನು ಮೊದಲು ಬಲಿಷ್ಟನನ್ನು ಕಟ್ಟಿಹಾಕದೆ ಆ ಬಲಿಷ್ಟನ ಮನೆಯನ್ನು ಹೊಕ್ಕು ಅವನ ಸೊತ್ತನ್ನು ಸುಲುಕೊಳ್ಳುವದು ಹೇಗೆ? ಕಟ್ಟಿಹಾಕಿದ ಮೇಲೆ ಅವನ ಮನೆಯನ್ನು ಸುಲುಕೊಂಡಾನು" (ಮತ್ತಾಯ 12:29). ಯೇಸು ಸತ್ತಾಗ ಅಗೋಚರ ಲೋಕವನ್ನು ("ಬಲವುಳ್ಳ ವ್ಯಕ್ತಿಯ ಮನೆ") ಪ್ರವೇಶಿಸಿದನು ಮತ್ತು ಸತ್ತ ನೀತಿವಂತರ ಆತ್ಮಗಳನ್ನು (ಸೈತಾನನ "ಆಸ್ತಿ") ಕೊಂಡು ಹೋದನು ಎಂಬುದಕ್ಕೆ ಈ ವಚನವು ಸಂಬಂಧಪಟ್ಟಿದೆ ಎಂದು ಹೇಳುತ್ತಾರೆ. ಈ ಕಲ್ಪನೆಯ ವಿವರಣೆಯು ಈ ಸಂದರ್ಭಕ್ಕೆ ಸಂಬಂಧಪಟ್ಟಿಲ್ಲ. ಜನರ ಜೀವಿತದಿಂದ ದೆವ್ವಗಳನ್ನು ಬಿಡಿಸುವದನ್ನು ಈ ವಚನ ಸೂಚಿಸುತ್ತದೆ[2] (ಮತ್ತಾಯ 12:24-29).
- *ಎಫೆಸದವರಿಗೆ 4:8.* ಉಪಯೋಗಿಸಿದ ಇನ್ನೊಂದು ವಾಕ್ಯವು ಎಫೆಸ 4:8, ಇದು ಕೀರ್ತನೆ 68:18ರಿಂದ ಉಲ್ಲೇಖಿಸಲಾಗಿದೆ: "ಆತನು ಉನ್ನತ ಸ್ಥಾನಕ್ಕೆ ಏರಿದಾಗ ತಾನು ಜಯಿಸಿದ್ದ ಬಹು ಜನರನ್ನು ಸೆರೆ ಹಿಡಿದುಕೊಂಡು ಹೋಗಿ ಮನುಷ್ಯರಿಗೆ ಧಾನಗಳನ್ನು ಮಾಡಿದನು." ಸೈತಾನನಿಂದ ಅಗೋಚರ ಲೋಕದಲ್ಲಿ "ಸೆರೆಹಿಡಿಯಿಲ್ಪಟ್ಟ" ನೀತಿವಂತರಾಗಿ ಸತ್ತವರನ್ನು ಯೇಸು ಆರೋಹಣವಾಗುವಾಗ ಅಗೋಚರ ಲೋಕದಿಂದ ಬಿಡುಗಡೆ ಮಾಡಿದನೆಂದು ಹಲವರು ಪ್ರತಿಪಾದಿಸುತ್ತರೆ. ಏನೇ ಆಗಿದ್ದರೂ ಸಹ ಈ ಗ್ರಂಥದಲ್ಲಿಯಾಗಲಿ ಅಥವಾ ಈ ಸನ್ನಿವೇಶದಲ್ಲಿಯಾಗಲಿ ಇದರ ಕುರಿತಾಗಿ ಯಾವುದೇ ಸೂಚನೆಗಳು ಇರುವುದಿಲ್ಲ. ರಾಜನು ತನ್ನ ಜಯೋತ್ಸವದೊಡನೆ ತನ್ನ ಪಟ್ಟಣವನ್ನು ಪ್ರವೇಶಿಸುವನು ಎನ್ನುವ ದೃಷ್ಟಾಂತದಂತಿದೆ (2 ಕೊರಿಂಥ 2:14-16 ಹೋಲಿಸಿರಿ). ಪರಭಾವಗೊಂಡ ರಾಜನ ವೈರಿಗಳು ಸೆರೆಯಿಂದ ಬಿಡಿಸಲ್ಪಟ್ಟಾಗ ಇಂತಹ ಕಾವಾಯಿತ್ತಿನ್ನು ಮಾಡುವರು. ವಾಕ್ಯವು ನಾಟಕೀಯ ರೂಪದಲ್ಲಿ ಹೇಳುತ್ತದೆ, ಶಿಲುಬೆ ಮೇಲೆ, ಯೇಸು ವೈರಿಗಳನ್ನು ಸೋಲಿಸಿದ್ದಾನೆ. ತನ್ನ ಜನರಿಗೆ "ಬಹುಮಾನಗಳನ್ನು" ಕೊಡುವುದಕ್ಕಾಗಿ ಅವರು ಯೋಗ್ಯತೆಯುಳ್ಳವರಾಗಿದ್ದಾರೆ. ಈ ಸನ್ನಿವೇಶದಲ್ಲಿ, ಜೀವಿಸುವ ಕ್ರೈಸ್ತರಿಗೆ ಆತ್ಮೀಕ ಬಹುಮಾನಗಳನ್ನು ದಯಪಾಲಿಸಲಾಗುವದು (ಎಫೆಸ 4:7-13) ಎಂದು ತಿಳಿಸಲಾಗಿದೆ.

ಕೊನೆಯ ವಿಶ್ಲೇಷಣೆಯಲ್ಲಿ, ಎರಡು ಮುಖ್ಯವಾದ ಆಧಾರ ವಾಕ್ಯ ಭಾಗಗಳಲ್ಲಿ ಮೊದಲನೆಯದು ಪ್ರಸ್ತಾಪಿಸಿದಂತೆ ಕಾಣುತ್ತದೆ: 2 ಕೊರಿಂಥ 5:8 ಮತ್ತು ಫಿಲಿಪ್ಪಿ 1:23.[3] "ಕರ್ತನ ಜೊತೆಗೆ" ಮತ್ತು "ಕ್ರಿಸ್ತನ ಜೊತೆಗೆ" ಎಂದು ಪೌಲನು ಹೇಳಿದ್ದನ್ನು ಮರಣದ ನಂತರ ಸತ್ತವರ ಮಧ್ಯಂತರ ಸ್ಥಿತಿಗೆ ಸಮನ್ವಹಿಸುವುದಕ್ಕೆ ಸಾಧ್ಯತೆಯಿದೆಯೇ?[4] ಈ ಜೀವನದಲ್ಲಿಯೂ ಸಹ ಕ್ರೈಸ್ತರು "ಕ್ರಿಸ್ತನೊಂದಿಗೆ" ಇದ್ದವರೆಂದು ಹೊಸ ಒಡಂಬಡಿಕೆ ಉಪದೇಶಿಸುತ್ತದೆ. ಎಲ್ಲಿ ಇಬ್ಬರು ಮೂವರು ನಿನ್ನ ಹೆಸರಿನಲ್ಲಿ ಕೂಡಿ ಬರುವರೋ ಅವರ ಮಧ್ಯದಲ್ಲಿ ನಾನಿದ್ದೇನೆ (ಮತ್ತಾಯ 18:20) ಎಂದು ಯೇಸು ಹೇಳಿದ್ದಾನೆ. "ನಾನು ಯುಗದ ಸಮಾಪ್ತಿಯವರೆಗೂ ಎಲ್ಲಾ ದಿವಸ ನಿಮ್ಮ ಸಂಗಡ ಇರುತ್ತೇನೆ" (ಮತ್ತಾಯ 28:20) ಎಂದು ಆತನು ವಾಗ್ದಾನ ಮಾಡಿದನು. "... ದೇವರು ನಿಮ್ಮೊಂದಿಗಿರಲಿ!" (2 ಥೆಸಲೋನಿಕ 3:16ಬಿ) ಎಂದು ಕ್ರೈಸ್ತರು ಇನ್ನೂ ಜೀವಂತರಾಗಿರುವಾಗಲೇ ಪೌಲನು ಪ್ರಾರ್ಥಿಸುತ್ತಾನೆ. ಕರ್ತನು "ನಮ್ಮ ಜೊತೆ" ಯಲ್ಲಿರುತ್ತಾನೆ ನಾವು ಸತ್ತಾಗ ನಮ್ಮನ್ನು ಬಿಟ್ಟು ಬಿಡುವುದಿಲ್ಲ. ನಾವು "ಕ್ರಿಸ್ತನಲ್ಲಿ ಸಾಯುವದಾದರೆ" ಆತನೊಂದಿಗೆ ನಮ್ಮ ಅನ್ಯೋನ್ಯತೆಯು ಇನ್ನೂ ಹೆಚ್ಚಾಗಿ ಮತ್ತು ಹತ್ತಿರವಾಗಿ ಇರುತ್ತದೆಂದು ನಿರೀಕ್ಷೆ ಮಾಡಬಹುದು (ಪ್ರಕಟಣೆ 14:13).

ಇದನ್ನು ಆಲೋಚಿಸಿ: ಹೆಚ್ಚಿನ ಜನರು, ಎಲ್ಲರೂ ಇಲ್ಲದಿದ್ದರೂ, ನೀತಿವಂತರಾಗಿ ಸಾಯುವವರು ನೇರವಾಗಿ ಪರಲೋಕಕ್ಕೆ ಹೋಗುತ್ತಾರೆ ಎಂದು ನಂಬುವವರು ಲೂಕ 16:19-31 ಶಿಲುಬೆಗೆ ಮುಂಚೆ ಸತ್ತವರ ಸ್ಥಿತಿಯನ್ನು ಸರಿಯಾಗಿ ವಿವರಿಸುತ್ತದೆಂದು ನಂಬುವವರಾಗಿದ್ದಾರೆ. "ಮಣ್ಣು [ದೇಹ] ಇದು ಮಣ್ಣಿಗೆ ಹಿಂತಿರುಗುತ್ತದೆ. ಮತ್ತು ಆತ್ಮವು ಕೊಟ್ಟಿರುವ ದೇವರಲ್ಲಿಗೆ ಹಿಂತಿರುಗುವದು" ಎಂದು ಪ್ರಸಂಗಿ 12:7ರಲ್ಲಿ ಸೊಲೊಮೋನನು ಹೇಳಿದ್ದನ್ನು ಮನಸ್ಸಿನಲ್ಲಿಟ್ಟುಕೊಳ್ಳಿ. 2 ಕೊರಿಂಥ 5:8 ಮತ್ತು ಫಿಲಿಪ್ಪಿಯವರಿಗೆ 1:23 ವಚನಗಳಿಗೆ ಬಳಸಿದ ತಾರ್ಕಿಕತೆಯನ್ನು ಉಪಯೋಗಿಸಿ, ಯೇಸು ಶಿಲುಬೆಯ ಮೇಲೆ ಮರಣ ಹೊಂದುವದಕ್ಕೆ ಮುಂಚೆ, ದೇಹವನ್ನು ಅಗಲಿದ ಆತ್ಮಗಳು ನೇರವಾಗಿ ಪರಲೋಕಕ್ಕೆ (ದೇವರು ಇರುವ ಸ್ಥಳಕ್ಕೆ) ಹೋಗಿವೆಯೆಂದು ನಾವು ಮುಕ್ತಾಯಕ್ಕೆ ಬರಬಹುದು. ಒಂದು ವೇಳೆ ನಾವು ಸರಿಹೊಂದುವ ಭಾಷೆಯನ್ನು ಪ್ರಸಂಗಿ 12:7ರಲ್ಲಿ ಉಪಯೋಗಿಸಿ ಮುಕ್ತಾಯ ಮಾಡಿದ್ದರೆ, 2 ಕೊರಿಂಥ 5:8 ಮತ್ತು ಫಿಲಿಪ್ಪಿ 1:23ರಲ್ಲಿ ಅದೇ ಭಾಷೆಯನ್ನು ಪೌಲನು ಉಪಯೋಗಿಸಿರಬಹುದೆಂದು ನಾವು ಮುಕ್ತಾಯಕ್ಕೆ ಬರಲು ಆಗುವುದಿಲ್ಲವೋ?

"ಸತ್ತವರು ಎಲ್ಲಿದ್ದಾರೆ?" ಎಂಬ ಪ್ರಸಂಗದಲ್ಲಿ ಪ್ರಸ್ತಾಪಿಸಿದಂತೆ, ನೀತಿವಂತರಾಗಿ ಸತ್ತವರು ನೇರವಾಗಿ ಪರಲೋಕಕ್ಕೆ ಹೋಗುವರು ಎಂಬುದಕ್ಕೆ ದೊಡ್ಡ ಆಕ್ಷೇಪಣೆ ಇದೆ. ಅದೇನೆಂದರೆ, ನ್ಯಾಯತೀರ್ಪಿನ ದಿನದ ಕುರಿತು ಸತ್ಯವೇದದ ಬೋಧನೆಯನ್ನು ಹೆಚ್ಚಾಗಿ ನಿರರ್ಥಕ ಮಾಡಿದೆ. ಕ್ರಿಸ್ತನು ಹಿಂತಿರುಗಿ ಬಂದಾಗ, ಒಂದು ನ್ಯಾಯ ತೀರ್ಪಿನ ದಿನವಿರುವ ಎಂಬುದಕ್ಕೆ ಬದಲಾಗಿ ಸತ್ತ ಕ್ಷಣದಲ್ಲೇ ಪ್ರತಿಯೊಬ್ಬರು "ನ್ಯಾಯ ತೀರ್ಪಿನ ದಿನವನ್ನು" ಎದುರುಗೊಳ್ಳುವರು ಎಂದು ಹೇಳಿ ಈ ಸಮಸ್ಯೆಯನ್ನು ಬಗೆಹರಿಸಲು ಒಬ್ಬನು ಪ್ರಯತ್ನಿಸಿದನು. ಸ್ಥಳದ ಅಭಾವದಿಂದ ನ್ಯಾಯ ತೀರ್ಪಿನ ದಿನದ ಕುರಿತಾಗಿ ಅಧ್ಯಯನ ಮಾಡಲು ಅವಕಾಶ ಇರುವುದಿಲ್ಲ, ಆದರೆ ಅದಕ್ಕೆ ಸಂಬಂಧ ಪಟ್ಟಿರುವ ಕೆಲವು ವಾಕ್ಯ ಭಾಗಗಳು ಇಲ್ಲಿವೆ:

(1) ಸತ್ಯವೇದವು ಆಗಾಗ "ನ್ಯಾಯತೀರ್ಪಿನ ದಿನದ" (ಮತ್ತಾಯ 10:15; 11:22, 24; 12:36; 2 ಪೇತ್ರ 2:9; 3:7; 1 ಯೋಹಾನ 4:17) ಮತ್ತು "ನ್ಯಾಯ ತೀರ್ಪಿನ ಮಹಾದಿನ" (ಯೂದ 6) ವಿಷಯವಾಗಿ ಮಾತಾಡುತ್ತದೆ. ದೇವರು "ಭೂಲೋಕದ ನ್ಯಾಯವಿಚಾರಣೆ ಮಾಡುವದಕ್ಕೆ ಒಂದು ದಿವಸ ಗೊತ್ತು ಮಾಡಿದ್ದಾನೆ. ಅವನನ್ನು ಸತ್ತವರೊಳಗಿಂದ ಎಬ್ಬಿಸಿದ್ದರಲ್ಲಿ ಇದನ್ನು ನಂಬುವದಕ್ಕೆ ಎಲ್ಲರಿಗೂ ಆಧಾರ ಕೊಟ್ಟಿದ್ದಾನೆ ಅಂದನು" (ಅಪೊಸ್ತಲರ ಕೃತ್ಯಗಳು 17:31) ಎಂದು ಪೌಲನು ಹೇಳಿದನು. ಯೇಸು ಈ ವಿಶೇಷ ದಿನವನ್ನು "ಕಡೆ ದಿನವೆಂದು" ಕರೆದನು (ಯೋಹಾನ 6:39, 40, 44, 54; 11:24; 12:48).

(2) ನ್ಯಾಯ ತೀರ್ಪಿನ ದಿನವು "ತನ್ನ ಮಹಿಮೆಯಲ್ಲಿ ಮತ್ತು ಎಲ್ಲಾ ದೇವ ದೂತರೊಂದಿಗೆ" ಕ್ರಿಸ್ತನು ಕೂಡಿ ಬರುವಾಗ ಪ್ರಾರಂಭವಾಗುತ್ತದೆ. (ಮತ್ತಾಯ 25:31ಎ). "ನಂತರ ತನ್ನ ಮಹಿಮೆಯ ಸಿಂಹಾಸನದಲ್ಲಿ ಕೂತುಕೊಳ್ಳುವನು" (ಮತ್ತಾಯ 25:31ಬಿ). ನೀತಿವಂತರು ಮತ್ತು ಅನೀತಿವಂತರಾಗಿ ಸತ್ತವರು ಎದ್ದೇಳುವರು (ಯೋಹಾನ 5:28, 29; ನೋಡಿರಿ ಪ್ರಕಟಣೆ 20:13ಎ).

(3) ಎಲ್ಲರೂ ಆ ಸಿಂಹಾಸನದ ಮುಂದೆ ನಿಂತುಕೊಳ್ಳುವರು (ಪ್ರಕಟಣೆ 20:11, 12 ನೋಡಿರಿ ಮತ್ತಾಯ 25:32ಎ[5]), ಮತ್ತು ಎಲ್ಲರೂ ನ್ಯಾಯ ತೀರ್ಪು ಹೊಂದುವರು (ಪ್ರಕಟಣೆ 20:12, 13). ಇದರಲ್ಲಿ ನೀತಿವಂತರೂ ಸೇರಿಸಲಾಗಿದೆ. "ನಾವೆಲ್ಲರೂ ದೇವರ ನ್ಯಾಯಾಸನದ ಮುಂದೆ ನಿಲ್ಲಬೇಕು" (ರೋಮಾಪುರ 14:10; ಒತ್ತಿ ಹೇಳಿದ್ದು ನನ್ನದು) ಎಂದು ಕ್ರೈಸ್ತರಿಗೆ ಬರೆಯುತ್ತಾ ಪೌಲನು ಹೇಳಿದನು. "ಯಾಕೆಂದರೆ ಪ್ರತಿಯೊಬ್ಬನು ತನ್ನ ದೇಹದ ಮೂಲಕ ನಡಿಸಿದ *ಒಳ್ಳೇದಕ್ಕಾಗಲಿ ಕೆಟ್ಟದ್ದಕ್ಕಾಗಲಿ* ಸರಿಯಾಗಿ ಪ್ರತಿಫಲವನ್ನು ಹೊಂದುವದಕ್ಕೋಸ್ಕರ ನಾವೆಲ್ಲರೂ ಕ್ರಿಸ್ತನ ನ್ಯಾಯಾಸನದ ಮುಂದೆ ಯಥಾಸ್ಥಿತಿಯಲ್ಲಿ ಕಾಣಿಸಿಕೊಳ್ಳಬೇಕು" (2 ಕೊರಿಂಥ 5:10; ಒತ್ತಿ ಹೇಳಿದ್ದು ನನ್ನದು) ಎಂದು ಆತನು ಪುನಃ

ಬರೆಯುತ್ತಾನೆ.

(4) ಯಾವಾಗ ಮನುಷ್ಯನು ನ್ಯಾಯತೀರ್ಪಿನ ಸಿಂಹಾಸನದ ಮುಂದೆ ನಿಂತಾಗ ಯೇಸು ಅವರಿಗೆ ...

> ... ಕುರುಬನು ಆಡುಗಳನ್ನು ಕುರಿಗಳನ್ನು ಬೇರೆ ಬೇರೆ ಮಾಡುವ ಪ್ರಕಾರ ಆತನು ಅವರನ್ನು ಬೇರೆ ಬೇರೆ ಮಾಡಿ ಕುರಿಗಳನ್ನು ತನ್ನ ಬಲಗಡೆಯಲ್ಲಿ ಆಡುಗಳನ್ನ ಎಡಗಡೆಯಲ್ಲಿ ನಿಲ್ಲಿಸುವನು. ಆಗ ಅರಸನು ತನ್ನ ಬಲಗಡೆಯಲ್ಲಿರುವವರಿಗೆ ನನ್ನ ತಂದೆಯ ಆಶೀರ್ವಾದ ಹೊಂದಿದವರೇ ಬನ್ನಿರಿ. ಲೋಕಾದಿಯಿಂದ ನಿಮಗೋಸ್ಕರ ಸಿದ್ಧಮಾಡಿದ ರಾಜ್ಯವನ್ನು ಸ್ವಾಸ್ತ್ಯವಾಗಿ ತೆಗೆದುಕೊಳ್ಳಿರಿ. ಆ ಮೇಲೆ ಆತನು ಎಡಗಡೆಯಲ್ಲಿರುವವರಿಗೆ - ಶಾಪಗ್ರಸ್ಥರೇ, ನನ್ನನ್ನು ಬಿಟ್ಟು ಪಿಶಾಚನಿಗೂ ಅವನ ದೂತರಿಗೂ ಸಿದ್ಧಮಾಡಿರುವ ನಿತ್ಯ ಬೆಂಕಿಯೊಳಕ್ಕೆ ಹೋಗಿರಿ; ಇವರು ನಿತ್ಯಶಿಕ್ಷೆಗೂ ನೀತಿವಂತರು ನಿತ್ಯ ಜೀವಕ್ಕೂ ಹೋಗುವರು (ಮತ್ತಾಯ 25:32-46; ನೋಡಿರಿ ಪ್ರಕಟನೆ 20:15; 21:1-4).

ನೀನು ಮತ್ತು ನಾನು ಸತ್ತವರ ಸ್ಥಿತಿ ಕುರಿತು ನಾವು ಒಪ್ಪದಿರಬಹುದು, ಆದರೆ ಒಂದು ಮಹಾ ನ್ಯಾಯತೀರ್ಪಿನ ದಿನವಿದೆ ಎಂದು ನಾವು ಒಪ್ಪಿಕೊಳ್ಳವವೆಂಬ ನೀರಿಕ್ಷೆ ನನಗಿದೆ. "ಜೀವನವು ಭೂಮಿಯ ಮೇಲೆ ಅತಿ ವೇಗವಾಗಿ ಮುಕ್ತಾಯದ ಹಂತಕ್ಕೆ ಓಡುತ್ತಿದೆ."[6]

"ಸತ್ತವರು ಎಲ್ಲಿದ್ದಾರೆ?" ಎನ್ನುವ ಪ್ರಸಂಗದಲ್ಲಿ ನಾನು ಹೇಳಿರುವ ವಿಷಯಗಳ ಬಗ್ಗೆ ಈ ಪ್ರಶ್ನೆಯನ್ನು ಕೇಳಿರುವಿರೆಂದು ಒಪ್ಪಿಕೊಳ್ಳುತ್ತೇನೆ: "ಲೂಕ 16 ನ್ಯಾಯತೀರ್ಪಿನ ದಿನಕ್ಕೆ ಮುಂಚೆ ರಕ್ಷಿಸಲ್ಪಟ್ಟವರು ಮತ್ತು ನಾಶನ ಹೊಂದುವವರ ಮಧ್ಯದಲ್ಲಿರುವ ಬೇರ್ಪಡಿಸುವಿಕೆಯನ್ನು ವಿವರಿಸುತ್ತಿದ್ದರಿಂದ ನ್ಯಾಯತೀರ್ಪಿನ ದಿನದ ಉದ್ದೇಶವೇನು?" ಈ ಪ್ರಸಂಗದಲ್ಲಿ ಮತ್ತು ಮತ್ತೊಂದು ಕಡೆಯಲ್ಲಿ, ಅನೇಕ ಸಾಧ್ಯತೆಗಳೊಂದಿಗೆ ಈ ಎರಡನ್ನು ಸೂಚಿಸಿದ್ದೇನೆ: ನ್ಯಾಯ ತೀರ್ಪಿನ ಪ್ರಾಥಮಿಕ ಉದ್ದೇಶವು, "ನಿರಪರಾಧಿಗಳು ಮತ್ತು ಅಪರಾಧಿಗಳೆಂದು ಕಂಡುಹಿಡಿಯುವಂಥದ್ದಲ್ಲ, ಆದರೆ ಇದು ನ್ಯಾಯವನ್ನು ಮತ್ತು ನಿರ್ಣಯವನ್ನು ವಿಧಿಸುವಂಥದ್ದಾಗಿದೆ."[7] ದೇಹವನ್ನು ಅಗಲಿದ ಆತ್ಮಗಳು ಸಂತೋಷ ಅಥವಾ ದುಃಖ ಸ್ಥಿತಿಯು ದೇವರಿಂದ ನೇಮಿಸಿದ್ದಲ್ಲ, ಆದರೆ ಪ್ರತಿಯೊಬ್ಬ ವ್ಯಕ್ತಿಯು ತನ್ನ ದೇಹ ಬಿಟ್ಟ ಮೇಲೆ ಆತ್ಮ ಸ್ಥಿತಿಯನ್ನು ತಿಳಿದುಕೊಳ್ಳುವದು ಅವಶ್ಯವಾಗಿದೆ. ಸತ್ತವರು ನೇರವಾಗಿ ಪರಲೋಕಕ್ಕೆ ಹೋಗುವರು ಎನ್ನುವದರಿಂದ ಬರುವ ಅನೇಕ ಸಮಸ್ಯೆಗಳಿಗಿಂತ ಮಧ್ಯಾಂತರ ಸ್ಥಿತಿಯ ಕುರಿತ ನಂಬಿಕೆಯಿಂದ ಉಂಟಾದ ಸಮಸ್ಯೆಗಳು ಚಿಕ್ಕವಾಗಿವೆ. ಆ ಸ್ಥಿತಿಯನ್ನು ನಾನು ಅರಿತುಕೊಂಡಾಗ, ಆತ್ಮಗಳು ಪರಲೋಕಕ್ಕೆ ಹೋಗುವವು ಎಂದು ಹೇಳುವುದರಿಂದ, ನಂತರ ನ್ಯಾಯತೀರ್ಪಿನ ಸಿಂಹಾಸನದ[8] ಮುಂದೆ ತೆಗೆದುಕೊಂಡು ಬರಲಾಗುತ್ತದೆ, ಮತ್ತು ನಂತರ ಅವರು ಮೊದಲಿದ್ದ ಸ್ಥಳಕ್ಕೆ ಹಿಂತಿರುಗುವರು.

ನಾನು ಮುಕ್ತಾಯ ಮಾಡುತ್ತಿದ್ದಂತೆಯೇ, ನಾವು ಈ ದೇಹದಲ್ಲಿರುವವರೆಗೆ ಈ ವಿಷಯದ ಕುರಿತಾಗಿ ಗ್ರಹಿಸಿಕೊಳ್ಳಲು ಆಗುವದಿಲ್ಲ. ನಿಜಾಂಶವೇನೆಂದರೆ, ಈ ಅಂಶವು ನನಗೆ ಬಹಳ ಚಿಂತೆಯನ್ನುಂಟು ಮಾಡುವಂತದಲ್ಲ. ಸಾವಿನಲ್ಲಿ ನನ್ನ ಕಣ್ಣುಗಳು ಮುಚ್ಚುವಾಗ ಪರದೈಸಿಯಲ್ಲಿ ಅಬ್ರಹಾಮನ ಎದೆಯಲ್ಲಿದ್ದುಕೊಂಡು ನನ್ನ ಕಣ್ಣುಗಳು ತೆಗೆದರೆ ನಾನು ರೋಮಾಂಚನಗೊಳ್ಳತ್ತೇನೆ. ಪರಲೋಕದಲ್ಲಿ ಯೇಸುವಿನ ಕೈಯಲ್ಲಿದ್ದು ನಾನು ನನ್ನ ಕಣ್ಣುಗಳು ತೆಗೆದಿರುವದನ್ನು ನಾನು ಕಂಡುಕೊಂಡರೆ ನಾನು ನಿರಾಶೆಗೊಳ್ಳುವುದಿಲ್ಲ. ನಿಜವಾಗಿಯೇ ನೀವು ನನ್ನ ಕೃತಜ್ಞತಾ ಸ್ತೋತ್ರ! ಕೇಳುತ್ತೀರಿ. ಮುಖ್ಯವಾದ ಸಂಗತಿ ಏನೆಂದರೆ ನಾನು ಮತ್ತು ನೀನು ಇಬ್ಬರೂ ಮರಣಹೊಂದಲು *ಸಿದ್ಧರಾಗಬೇಕಿದೆ.* ನಮ್ಮ ಆತ್ಮ *ಎಲ್ಲಿ ಹೋದರು* ನಾವು "ಕರ್ತರೊಂದಿಗೆ"! ಇರುತ್ತೇವೆ. ಆಮೇನ್ ಮತ್ತು ಆಮೇನ್.

ಟಿಪ್ಪಣೆಗಳು

[1]"Accommodate" ಇದರ ಅರ್ಥವು ಹೊಂದಿಕೆ ಮಾಡು ಸರಿಪಡಿಸುವ ಭಾಷೆ ಇದನ್ನು ಪದಗಳನ್ನು ಸರಿಯಾಗಿ ಉಪಯೋಗಿಸುವ ಶಾಸ್ತ್ರವೆಂದ "ಹೊಂದಿಸಲಾಗಿದೆ" ಸದ್ಯದಲ್ಲಿ ಅದನ್ನು ಉಪಯೋಗ ಮಾಡುತ್ತಿದ್ದಾರೆ. [2]ಮತ್ತಾಯ 12:29 ಇದರ ಕುರಿತು ಇರುವ ಆಳವಾದ ಅಭಿಪ್ರಾಯ ನೋಡಿರಿ *ಕ್ರಿಸ್ತನ ಜೀವನ ಚರಿತ್ರೆ, 2ನೇ* ಎನ್ನುವ ಪುಸ್ತಕದ "ಚಟುವಟಿಕೆ ದಿನ" ("A Busy Day") ಎನ್ನುವ ಅಧ್ಯಾಯದಲ್ಲಿ ಇದನ್ನು ಕಂಡುಕೊಳ್ಳಬಹುದು. [3]"ಸತ್ತವರು ಎಲ್ಲಿದ್ದಾರೆ?" ಈ ಲೇಖನ ಮತ್ತು ಪ್ರಸಂಗ ಕೆಲವೊಂದು ವಿಷಯಗಳು ಒಂದಕ್ಕೊಂದು ಮುಚ್ಚಿಕೊಂಡಂತೆ ಇವೆ. ಆದರೆ ಪ್ರತಿಯೊಂದರಲ್ಲಿ ಹೆಚ್ಚಿನ ವಾದ ವಿವಾದ ಬೇರೋಂದಕ್ಕಿಂತಲೂ ಹೆಚ್ಚಾಗಿ ಇಲ್ಲಿ ಮಾಡಲಾಗಿದೆ. ಪೂರ್ಣವಾದ ಚರ್ಚೆಗಾಗಿ ಎರಡು ಮೂಲ ಸ್ಥಾನಗಳನ್ನು ಪರಿಕ್ಷಿಸಬೇಕು. [4]ಪ್ರೇರಣೆಯುಳ್ಳ ಬರಹಗಾರರು ಬರೆಯುವಾಗ ಕೆಲವು ಸಾರಿ ಅವರ ಹೇಳಿಕೆಗಳು ಮೇಲ್ನೋಟಕ್ಕೆ ವಿರೋದಾತ್ಮವನ್ನು ಕಾಣುತ್ತೇವೆ. ಅವರು ಹೇಳಿಕೆಗಳನ್ನು ಸಾಮಾನ್ಯ ರೀತಿಯಲ್ಲಿ ಅಥವಾ ಪರಿಣಾಮಕಾರಿಯಾಗಿ ಸ್ವರ ಸಾಮರಸ್ಯ ಉಂಟುಮಾಡುತ್ತದೆ. ಎರಡು ಹೇಳಿಕೆಗಳು ನಿಜವಾಗಿರುತ್ತವೆ ಮತ್ತು ಅವುಗಳು ಅಲ್ಲಿಯೇ ಕೆಲವು ಕಾರಣಗಳಿಂದ ಅಲ್ಲಿಂದ ಬಿಡುತ್ತಾರೆ. ಆದರೆ ಪಾಶ್ಚಾತ್ಯ ಮನಸ್ಸು ಸ್ವರಸಾಮರಸ್ಯ ತರುವವರೆಗೆ ಅವರು ಪ್ರಯತ್ನ ಮಾಡುತ್ತಾರೆ. [5]ಕೆಲವೊಬ್ಬರು ಮತ್ತಾಯ 25 ಮತ್ತು ಪ್ರಕಟಣೆ 20ರ ಬೋಧನೆಯಲ್ಲಿ ಸ್ವಲ್ಪರಿಯಾಯಿತಿ ತೋರಿಸುತ್ತಾರೆ ಇವೆಲ್ಲವು ತಾತ್ಕಾಲಿಕವಾದ ಘಟನೆಗಳೆಂದು ಹೇಳುವರು. [6]David Roper, "Revelation, 10," *Truth for Today* (November 1999), 21. [7]David Roper, "When the Books Were Opened" (tract) (Pasadena, Tex.: Haun Publishing Co., n.d.), 9. [8]ಮೊದಲು ಗಮನಿಸಿದಂತೆ ಜನರು ಇದರ ಚಿತ್ರಣದಿಂದ ಜಾರಿಕೊಳ್ಳಲು ಪ್ರಯತ್ನಿಸುತ್ತಿದ್ದಾರೆ. ಒಂದು ಮಹಾದಿನವೇ ಅಲ್ಲಿ ಎಲ್ಲರು ನ್ಯಾಯತೀರ್ಪು ಹೊಂದುವರು ಎಂದು ಹೇಳುತ್ತಾರೆ. ನ್ಯಾಯತೀರ್ಪಿನ ದಿನದ ವಿಷಯದಲ್ಲಿ ಸತ್ಯವೇದದವು ಬಹಳ ಸ್ಪಷ್ಟತೆಯನ್ನು ಹೊಂದಿದೆ.